International Journal of Kannada Research
www.kannadajournal.com

**ISSN: 2454–5813**
IJKR 2023; 9(2): 01-06
© 2023 IJKR
www.kannadajournal.com
Received: 01-01-2023
Accepted: 04-02-2023

**Dr. Poornima Dhamannavar**
Department of Kannada,
Rani Channamma University
PG Centre, Vijayapura,
Karnataka, India

**Corresponding Author:**
**Dr. Poornima Dhamannavar**
Department of Kannada,
Rani Channamma University
PG Centre, Vijayapura,
Karnataka, India

# ಜಾನಪದ ಸಾಹಿತ್ಯದಲ್ಲಿ ಸ್ತ್ರೀ

**Dr. Poornima Dhamannavar**

**ಪೀಠಿಕೆ**

ಗ್ರಂಥಸ್ಥ ಅಕ್ಷರದ ಅರಿವು ಆರಂಭವಾಗುವ ಮುನ್ನ ಹುಟ್ಟಿಕೊಂಡ ಈ ಜಾನಪದ ಸಾಹಿತ್ಯ ಇತರನ್ನು ಮೆಚ್ಚಿಸಲಿಕ್ಕಾಗಿ ಹುಟ್ಟಿದಲ್ಲ. ಜನಪದರು ತಾವು ಅನುಭವಿಸಿದ ನೋವು–ನಲಿವು, ದುಃಖ–ದುಮ್ಮಾನ, ಆಶೆ–ನಿರಾಶೆಗಳನ್ನು ಹೃದಯದಿಂದ ಹಾಡಿದರು. ಅದು ಕಿವಿಯಿಂದ ಕಿವಿಗೆ ಹಾಡಾಗಿ, ಗೀತೆ, ಕಥೆ, ನೀತಿ, ಲಾವಣಿ, ಒಗಟು, ನಾಟಕ, ಚಿತ್ರ, ಶಿಲ್ಪ, ನಂಬಿಕೆ ಆಚಾರ–ವಿಚಾರ ಸಂಪ್ರದಾಯ ಈ ರೀತಿ ವ್ಯಾಪಕವಾಗಿ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಇದರಲ್ಲಿ ಗ್ರಾಮೀಣ ಜನರ ಬದುಕು, ಜೀವನ, ಸಾಸ್ಕೃತಿ, ನಿಸರ್ಗ ಇವೆಲ್ಲ ಒಳಗೊಂಡಿರುತ್ತದೆ.

ಜಾನಪದ ಎಂಬ ಪರಿಕಲ್ಪನೆ ಜನರ ಒಡನಾಡದ ಜನಜೀವನವಾಗಿದೆ. ನಮ್ಮ ನಿತ್ಯ ಜೀವನದೊಂದಿಗೆ ಸಮಷ್ಠಿ ಆಚರಣೆಯನ್ನು ಕಟ್ಟಿ ಕೊಡುವ ವ್ಯವಸ್ಥೆಯೇ ಜಾನಪದ. ಜಾನಪದ ಎಂಬ ಪದ ಅನಾದಿ ಕಾಲದಿಂದ ಬಳಕೆಯಿದ್ದು, ಜನಪದ ಎನ್ನುವುದೇ ಆಡಳಿತವೆಂದು ಗುರುತಿಸಿಕೊಳ್ಳುತ್ತದೆ. 'ಜನವಾಣಿ ಬೇರು ಕವಿ ವಾಣಿ ಹೂ' ಎಂಬ ಮಾತು ಎತ್ತಿ ತೋರಿಸುತ್ತದೆ.

'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳಿಂದ' ರಚಿತವಾದ ಜಾನಪದವು ನಮ್ಮ ಪ್ರಾಚೀನ ಜನತೆ ಕಾವ್ಯ ರಚಿಸಿದ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಆಧುನಿಕ ಬದುಕಿಗೆ ಪ್ರೇರಣೆಯನ್ನು ಕಲ್ಪಿಸುತ್ತದೆ. ಸಮಾಜ ಸಮ್ಮತಿಸಿದ ಕಲಿಕೆಗಳೆಲ್ಲಾ ನಡುವಳಿಕೆಗಳು ಸಂಸ್ಕೃತಿಯ ಅಂಗವೆಂದು ಪರಿಗಣಿಸುವುದರಿಂದ ಜನಪದವು ಸಾಮಾನ್ಯ ಮನಸ್ಸುಗಳ ಸಂಸ್ಕೃತಿ ಅಂಗವೆಂದು ಸ್ಪಷ್ಟಪಡಿಸಿರಬಹುದು. ಶ್ರಮ ಜೀವಿಗಳಾದ ಜನಪದರು ತಮ್ಮ ಆಯಸ ಪರಿಹಾರಕ್ಕೊಸ್ಕರ ಅನುಭವ ಮುಕ್ತವಾದ ಜಾನಪದ ಹಾಡುಗಳನ್ನು ರಚಿಸಿದರು. ಗ್ರಾಮ್ಯ ಸಮಾಜದ ಕಷ್ಟ–ನೋವುಗಳಿಗೆ ಸ್ಪಂದಿಸಿ ನೀತಿಯನ್ನು ಉಪದೇಶಿಸಿದರು. ಮೌಖಿಕತೆಯನ್ನು ಇವರ ಶುದ್ಧ ಸಾತ್ವಿಕ ಶಕ್ತಿ ಆದ್ದರಿಂದ ಜಾನಪದವನ್ನು ಬಾಯಿಂದ ಬಾಯಿಗೆ ಹರಿದಾಡಿದ ಕಂಠಸ್ಥ ಸಾಹಿತ್ಯ ಎಂಬ ಪದ ಬಳಕೆಯೂ ಸಹ ಇದೆ.

ಜನಪದ ಸಾಹಿತ್ಯದಲ್ಲಿ ಮಹಿಳೆಗೆ ಪ್ರಮುಖ ಸ್ಥಾನವನ್ನು ಕಾಣುತ್ತೇವೆ. ಮಹಿಳೆ, ಪತಿವ್ರತೆ. ಗರತಿ, ಉದಾರಿ, ತ್ಯಾಗಿಯ ಸ್ಥಾನದಲ್ಲಿ ಚಿತ್ರತಳಾಗಿದ್ದಾಳೆ. ಇವೆಲ್ಲವನ್ನು ಮಹಿಳೇ ತಾಯಿಯಾಗಿ, ಪತ್ನಿಯಾಗಿ, ಸಹೋದರಿಯಾಗಿ, ಮುತ್ತೈದೆಯಾಗಿ ದೇವತೆಯಾಗಿ ಹಲವು ರೂಪಗಳು ಮುಖಾಂತರ ಅಭಿವ್ಯಕ್ತಳಾಗುತ್ತಾಳೆ. ಹಾಗೇ ಮಹಿಳೆಯ ತಾಯ್ತನ, ಮುತ್ತೈದೆತನ, ದಾಪಂತ್ಯ ಜೀವನ, ತವರಿನ ಹಂಬಲ, ಸಹೋದರರ ವಾತ್ಸಲ್ಯ ಇವು ಒಂದು ಬಗೆಯ ಮುಖವಾದರೇ ಇದರ ಇನ್ನೊಂದು ಮುಖ ಗರತಿಯ ಹಾಡುಗಳು ಮಹಿಳೆ ತನ್ನ ಹಲವಾರು ಕಾಯಕಗಳಲ್ಲಿ ದಣಿವು ಆರಿಸಿಕೊಳ್ಳಲು ನಿವಾರಿಸಲು ಅನೇಕ ಹಾಡುಗಳನ್ನು ಹಾಡುತ್ತಿದ್ದಳು.

'ಏಳುತಲೆ ಎದ್ದು ಯ್ಯಾರಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ್ ! ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನ'[1]

ಎಂದು ಮುಂಗೋಳಿ ಕೂಗುವ ಮುನ್ನ ಕುಲದೈವ ಭೂಮಿತಾಯಿಯನ್ನು ಸ್ಮರಣೆ ಮಾಡುತ್ತಾಳೆ. ನಾವೆಲ್ಲ ಭೂಮಿತಾಯಿಯ ಮಕ್ಕಳು ಎಂಬುದು ಗರತಿಗೆ ಅರಿವಾಗಿದೆ. ಹೆತ್ತಮಕ್ಕಳ ಹಾಲುಣಿಸುವ ತಾಯಿಯ ಆಸರೆಯನ್ನು ಅವಳ ಮಮಕಾರವನ್ನು ಬಯಸುತ್ತೇವೆ. ಆದರೆ ಎಲ್ಲರಿಗೂ ದೊಡ್ಡತಾಯಿ ಭೂಮಾತೆ, ಅವಳೇ ನಮ್ಮ ಬಾಳಿಗೆ ಆಸರೆ ಎದ್ದು ಭಕ್ತಿಯಿಂದ ನಮಿಸುತ್ತಾಳೆ.

ಪ್ರತಿನಿತ್ಯ ಗರತಿಯರ ಮೊದಲ ಕೆಲಸ ರಾಗಿ ಬೀಸುವುದು. ಪ್ರಸ್ತುತ ಆಧುನೀಕರಣಕ್ಕೆ ಹಿಟ್ಟಿನ ಗಿರಣಿ ಪ್ರವೇಶದಿಂದ ಈ ಪರಿಕಲ್ಪನೆಯು ಕೂಡ ಮರೆ ಆಗುತ್ತಿದೆ. ಇಂದು ರಾಗಿ ಬೀಸುವ ಕಲ್ಲಿನ ಸರಸರ ಶಬ್ದವೂ ಇಲ್ಲ. ಗರತಿಯರ ಸೊಗಸಾದ ಸೊಲ್ಲಿನ ಉಲಿಯೂ ಇಲ್ಲ. ಆದರೆ ಪೂರ್ವಕಾಲ ರಾಗಿ ಬೀಸುವುದು ಅನಿವಾರ್ಯ ಆಗಿತ್ತಲ್ಲವೇ. ಕಲ್ಲಿಡಿದು ಬೀಸುವ ಗರತಿ ಸುಮ್ಮನೆ ಬಿಸುತ್ತಿದ್ದಳೆ ಇಲ್ಲ. ಪದಗಳ ಮೂಲಕ ತನ್ನ ಕೆಲಸ ಪ್ರಾರಂಭಿಸುತ್ತಿದ್ದಳು ಆ ಪದ್ಯ ಈ ಮುಂದಿನಂತಿದೆ.

'ಸುಮ್ಮನೆ ಬೀಸಿದರೆ ಬೀಳ್ವದು ಈ ಕಲ್ಲು
ನಾಗಸೊರದಂತೆ ದನಿಯೆತ್ತಿ! ಹಾಡಿದರ
ಗುಮ್ಮನೆ ಬೀಳುವುದು ಈ ಕಲ್ಲು'[2]

ವಿದ್ಯೆಯ ಗಂಧವೇ ಇಲ್ಲದ ಗರತಿಯು ಅಲಂಕಾರಬದ್ಧವಾಗಿ ನುಡಿದಿರುವ ಈ ಹಾಡು ಅವಳ ಕಾಯಕಕ್ಕೆ ಸಂಗೀತ ಅನಿವಾರ್ಯವೆಂಬುದನ್ನು ಸೂಚಿಸುತ್ತದೆ. ಹೆಣ್ಣುಮಗಳು ಮದುವೆ ಆಗಿ ಗಂಡನ ಮನೆಗೆ ಹೋಗುವ ಸಂದರ್ಭದಲ್ಲಿ ತಿಳುವಳಿಕೆ ಹೇಳುವಳು. ಇದರ ಜೊತೆಗೆ ಕೆಲವು ನೀತಿ ಮಾತುಗಳು ಇದರ ಜೊತೆಗೆ ಕೆಲವು ನೀತಿ ಮಾತುಗಳನ್ನು ಹೇಳುತ್ತಾಳೆ.

'ಕರಿಸೀರೆ ಉಡಬ್ಯಾಡ ಕಡಿವಾಣ ಬೀಡಬೇಡ
ನಡು ಓಣ್ಯಾಗ ನಿಂತು ನಗಬೇಡ
ತವರಿಗೆ ಮಾತ ತರಬೇಡ'
ಅತ್ತೆ ಮನೆಯಲ್ಲಿ ಮುತ್ತಾಗಿ ಇರಬೇಕ
ಹೊತ್ತಾಗಿ ನೀಡಿದ್ರ ಉಣಬೇಕು! ಮಗಳೆ
ತವರಿಗೆ ಹೆಸರು ತರಬೇಕು'
ಗಂಡನೇ ಗುರು ಅವ್ವ ಗಂಡನೇ ದೇವರು ಕೇಳು
ಗಂಡನೇ ಹೊರತು ಗತಿಯಿಲ್ಲ! ಹೆಣ್ಣಿಗೆ
ಗಂಡನೇ ಸಕಲ ಸೌಭಾಗ್ಯ.[3]

ಎಂದು ತವರು ಮನೆಗೆ ಒಳ್ಳೆಯ ಕೀರ್ತಿ ತರುವಂಥ ಮಗಳಾಗು ಎನ್ನುತ್ತಾಳೆ. ತಾಯಿ ಇದಕ್ಕೆ ಉತ್ತರವಾಗಿ ಮಗಳು–

'ತಾವರೆಯ ಗಿಡಹುಟ್ಟಿ ದೇವರಿಗೆ ನೆರಳಾಗಿ
ನಾ ಹುಟ್ಟಿ ಮನೆಗೆ ಎರವಾದೆ! ಹಡೆದವ್ವ
ನೀ ಕೊಟ್ಟ ಮನೆಗೆ ಹೆಸರಾದೆ'[4]

ಎಂದು ಹೇಳಿ ಈ ರೀತಿ ಬಾಳಲು ಆಶಿಸುವಳು. ಗಂಡನ ಮನೆಗೆ ಹೊರಡುವ ಮುನ್ನ ತಾಯಿ ಕೊಟ್ಟ ಸೀರಿ ಉಟಗೊಂಡು ಇದ್ದಷ್ಟು ಬಂಗಾರದ ಆಭರಣ ಹಾಕಿಕೊಂಡು ತವರಿಗೆ ಹೊಸ್ತಿಲಿಗೆ ನೀರು ಹಾಕಿ ಬಾಗಿ ಶರಣೆಂದು ತವರಿಗೆ ಯಶಸ್ಸು ಸಿಗಲಿ ಅಂತ ಹರಕೆ ಕೊಟ್ಟು ಹೋಗುತ್ತಾಳೆ. ಆಗ ತಾಯಿ ತನ್ನ ಮಗಳಿಗೆ ಸಂಸ್ಕಾರಯುತವಾದ ಮಾತುಗಳನ್ನು ಹೇಳುತ್ತಾಳೆ. ಅದರೆ ಇಂದಿನ ಸಂದರ್ಭದಲ್ಲಿ ಇವೆಲ್ಲ ಮರೆಯಾಗಿ ಮನಸ್ಸು ಮನೆಯನ್ನು ಒಡೆಯುವ ಚತುರ ಮಾತುಗಳನ್ನು ಭಿತ್ತುವಳು. ಇಂದಿನ ಹೆಣ್ಣು ಮಕ್ಕಳಲ್ಲಿ ತವರು ಮನೆಯವರು ಬಂದಾಗ ವರ್ತನೆ ಭಿನ್ನವಾಗಿರುತ್ತದೆ. ಹೀಗಾಗಿ ಮಗ ಮದುವೆಯಾದ ಕೂಡಲೇ ತನಗೆ ಪರಕೀಯವಾದ ಎನ್ನುವ ಭಾವವು ಆ ತಾಯಿಗೆ ಮೂಡಿ ಬರುತ್ತದೆ. ಈ ಕೆಳಗಿನ ತ್ರಿಪದಿಯನ್ನು ಗಮನಿಸಬಹುದು.

'ಹಾಲು ಬಾನ ಉಣಿಸಿ ಮಾರಿ ಸೆರಗಲಿ ಒರಿಸಿ
ನೀ ಯಾರಿಗ್ಯಾದೋ ನನ ಮಗನೆ! ಬಂದಂತೆ
ನಾರಿಗಾದ್ಯಲ್ಲೋ ಹಡದಪ್ಪ ಎಂದು ಹಲಬುತ್ತಾಳೆ. ಇಲ್ಲಿಯ ತಾಯಿಗೆ ಕರುಳಬಳ್ಳಿ ಕತ್ತರಿಸಿದ ಅನುಭವಾಗಿದೆ. ಪ್ರಾಪ್ತ ವಯಸ್ಕಳಾದೊಡನೆ ಗಂಡನ ಮನೆ ಪ್ರವೇಶಿಸುವ ಹೆಣ್ಣು ತನ್ನ ತವರು ಮನೆ ಆಗಲಿ, ಗಂಡನ ಮನೆಯಾಗಲಿ, ತನ್ನ ನೋವನ್ನು ನುಂಗಿಕೊಂಡು ಹೊಸ ಮನೆಗೆ ಬಂದು ಮಡದಿಯಾಗಿ, ಸೊಸೆಯಾಗಿ, ಅತ್ತಿಗೆ, ನಾದಿನಿ–ನೆಗಣ್ಣಿಯಾಗಿ ಕುಟುಂಬದ ಸದಸ್ಯಯಾಗುತ್ತಾಳೆ. ತನ್ನ ಕೈ ಹಿಡಿದ ಗಂಡನ ಬಗ್ಗೆ ಅಭಿಮಾನವನ್ನು ಹೊಂದಿದ್ದಾಳೆ ಎನ್ನುವುದಕ್ಕೆ ಈ ತ್ರಿಪದಿಗಳೆ ಸಾಕ್ಷಿ.

ಎಲ್ಲೆಲ್ಲಿ ನೋಡಿದರ ನಲ್ಲನಂಥವರಿಲ್ಲ
ಹಲ್ಲು ನೋಡಿದರ ಹವಳವ ನಲ್ಲನ
ಸೊಲ್ಲು ಕೇಳಿದರ ಸಮಾಧಾನ'
'ಸರದಾರ ನಿಮ್ಮಿಂದ ಸುರವೆಲ್ಲ ಮರೆತೇನ
ಸರದಾರ ಇರುವ ಗುಳಿದಾಳಿ! ನಿಮ್ಮಿಂದ
ಸರುವ ಬಳಗೆಲ್ಲ ಮರೆತೇನ'
'ಕೂಲಿ ಮಾಡಿದರೇನ ಕೋರಿ ಹೊತ್ತರೇನ
ನಮಗ ನಮರಾಯ ಜಡಮೇನ ! ಬಂಗಾರ
ಮ್ಯಾಲ ಇದ್ದಂಗ ಮನಿಯಾಗ'[5]

ಗಂಡನ ಮನೆಯಲ್ಲಿ ಪ್ರೀತಿ ವಿಶ್ವಾಸದ ಕೊರತೆಯಾಗದಿದ್ದರೆ ಅವಳ ಜೀವನಕ್ಕೆ ನೆಮ್ಮದಿ. ಕುಟುಂಬದ ನೆಮ್ಮದಿಯ ವಾತಾವರಣವಿದ್ದಾಗ ತವರ ಮನೆಯ ಕರೆಯಲು ಬಂದಾಗ–

'ಹಚ್ಚಡದ ಪದರಾಗ ಅಚ್ಚಮಲ್ಲಿಗೆ ಹೂವ
ಬಿಚ್ಚಿ ನನಮ್ಯಾಗ ಒಗೆವಂಥ ! ರಾಯರನ
ಬಿಟ್ಟಾಂಗ ಬರಲೇ ಹಡೆದವ್ವ' ಎನ್ನವಳು.

ದಾಂಪತ್ಯ ಜೀವನದಲ್ಲಿ ವಿರಸ ಸಹಜ. ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಂಗ, ಗಂಡ ಹೆಂಡಿರಜಗಳ ಉಂಡು ಮಲಗುವ ತನಕ ಈ ಗಾದೆಗಳು ಬಹಳ ಹಿಂದಿನಿಂದಲೂ ಪ್ರಚಲಿತವಾಗಿದೆ. ಈಗ ಗಂಡ ಹೆಂಡಿರ ಜಗಳ ವಿಚ್ಛೇದನ ತನಕ ಹೋಗುವಂತಾಗಿದೆ. ಆದರೆ ಮೊದಲಿನ ಸಂದರ್ಭವನ್ನು ಗಮನಿಸಿದಾಗ ಗರತಿ ಹೇಳುವ ಮಾತು ನೋಡಿದರೆ ಆಕೆಯ ಉದಾರ ಮನೋಭಾವ ಎಷ್ಟಿತ್ತು ಎಂಬುವುದು ಈ ತ್ರಿಪದಿಯಿಂದ ತಿಳಿದು ಬರುತ್ತದೆ.

'ಬಟ್ಟಲಗಣ್ಣೇಲಿ ದಿಟ್ಟಿಸಿ ನೋಡ್ಯಾರ
ಸಿಟ್ಟ್ಯಾಕೋ ರಾಯ ನನಮ್ಯಾಗ ! ನಾ ಅಂಥ
ಹುಟ್ಟಿಸ್ಯಾಡವರ ಮಗಳಲ್ಲ'[6]

ತಾನು ಸಂಸ್ಕಾರಯುತ ಮನೆತನದಿಂದ ಬಂದವಳು ಅನುಮಾನ ಇರಬಾರದು ಎಂದು ಭಾವ ವ್ಯಕ್ತಪಡಿಸುತ್ತಾಳೆ. ಆದರೆ ಸಿಟ್ಟು ಇಳಿಯದಿದ್ದಾಗ

'ಕಟ್ಟಾಣಿ ಗುಂಡೀಗಿ ಸಿಟ್ಟು ಮಾಡಲಿ ಬೇಡ
ಬಿಟ್ಟ ಬಂದದೆ ಬಳಗೆಲ್ಲ! ಪತಿರಾಯ

ಕಟ್ಟ್ಯಾರ ತಮ್ಮ ಪರದಾಗ' ಎನ್ನುವಳು. ಹೀಗೆ ಗಂಡನೇ ದೇವರು ಸರ್ವಸ್ವ ಎಂದಾಗ ಓರ್ವ ಹೆಣ್ಣು ಮಗಳು ಬಂದು ಚಾಡಿ ಹೇಳುವಳು.

'ಚಿಂತಾಕ ಇಟಗೊಂಡು ಚಿಪ್ಪಾಟಿ ಬಳಿವಾಕೆ
ಚಿಂತಿಲ್ಲಿ ಎನ್ ನಿನಗಿಷ್ಟು! ನಿನಗಂಡ
ಅಲ್ಲೊಬ್ಬಳ ಕೂಡ ನಗುತಿದ್ದ'[7]

ಈ ಸಂದರ್ಭದಲ್ಲಿ ತನ್ನ ಗಂಡನ ಮೇಲೆ ಸಿಟ್ಟು ಬಂದರೂ ಅದನ್ನು ತೋರಿಸದೇ

'ನಕ್ಕರೆ ನಗಲೆವ್ವ ನಗಿ ಮುಖದಿ ಕ್ಯಾದಗಿ
ನ ಮುಟ್ಟಿ ಮುಡಿವ ಪರಿಮಳವ! ಆ ಹೂವ
ಅವಳೊಂದು ಗಳಿಗೆ ಮುಡಿಯಲ್ಲಿ'[8]

ಎಂದು ತನ್ನ ಗಂಡನ ಬಗ್ಗೆ ಅಸೂಯೆ ಏಕೆ ಎನ್ನುವ ಭಾವದಲ್ಲಿ ಈ ರೀತಿ ಹೇಳುವಳು. ಮುಂದುವರೆದ ಗರತಿ ತನ್ನ ಗಂಡನಿಗೆ ಎಚ್ಚರಿಕೆಯನ್ನು ಕೂಡ ಕೊಡುತ್ತಾಳೆ.

'ಎಲ್ಲಿ ಹೋಗಿದ್ದಿ ರಾಯ ಸೆಲ್ಲ್ಯಾಕ ಮಾಸೇದ
ಅಲ್ಲೊಬ್ಬಳ ಕೂಡ ಸಂಗೀಯ ಮಾಡಿ
ಇಲ್ಲಂಬುದೇನ ನನಮುಂದೆ'[9]

ಎಂದು ಗಂಡನಿಗೆ ಸತ್ಯ ಹೇಳಲು ಒತ್ತಾಯಿಸುತ್ತಾಳೆ. ಹಾಗೆ ಅಂಥ ಪ್ರಸಂಗ ಬಂದಾಗ ಗಂಡನಿಗೆ ನೀತಿ ಪಾಠ ಹೇಳುವಳು. ಇಂತಹಃ ಸಂದರ್ಭದಲ್ಲಿಯೂ ಕೂಡ ತನ್ನ ಗಟ್ಟಿತನವನ್ನು ತನ್ನ ಗಂಡನ ಮುಂದೆ ಪ್ರಸ್ತಾಪಡಿಸಿಕೊಳ್ಳುತ್ತಾಳೆ.

'ಅಂಗೀಯ ಮ್ಯಾಲಂಗಿ ಛಂದೇನೋ ನನರಾಯ
ರಂಭೀಯ ಮ್ಯಾಲ ಪ್ರತಿರಂಭಿ! ಬಂದ್ರ
ಛಂದೇನೋ ರಾಯ ಮನಿಯಾಗ'[10]

ತಾನೇ, ರಂಭೆ, ಊರ್ವಶಿ ಎಂಬುವುದನ್ನು ಒತ್ತಿ ಹೇಳುತ್ತಾ ರಂಭಿಯ ಮ್ಯಾಗ ಪ್ರತಿರಂಭಿ ಏಕೆ ಎನ್ನುವಳು. ಗಂಡನನ್ನು ಸರಿ ದಾರಿಗೆ ತರಲು ಪ್ರಯತ್ನವನ್ನು ಮಾಡುವವಳು. ಪ್ರೀತಿಯ ಭಾವ ಸಂಬಂಧಗಳನ್ನು ಹಂಚಿಕೊಂಡಾಕೆ ಗುರುವೆಂಬ ತಾಯಿಗೆ ಗೌರವಿಸುವ ಹಿರಿದಾದ ಮನಸ್ಸು ಮಗಳಿಗೆ 'ಯಾರು ಇದ್ದರೂ ತನ್ನ ತಾಯವ್ವನೊಲರು' ಎಂಬ ಅಭಿಮಾನ ಮಾತುಗಳು ಕತ್ತಲೆಯ ಬದುಕಿಗೆ ಆಶಾಕಿರಣವಾದ ತಾಯಿಯ ಋಣವನ್ನು ಜ್ಯೋತಿಗೆ ಹೋಲಿಸಿ ಸಾರ್ಥಕತೆಯನ್ನು ಹಂಚಿಕೊಳ್ಳುತ್ತಾಳೆ. ಜ್ಯೋತಿ ನಿನ್ನಾರ ಹೋಲರು. ಜಾನಪದ ಸಮಾಜ ಪ್ರಧಾನವಾಗಿ ನಂಬಿದ್ದು ತಾಯಿಪರವಾದ ದೇವರನ್ನು ತಾಯಿ ಎಂಬ ಚೈತನ್ಯ ಮೌಲ್ಯದ ಖನಿಯನ್ನು ಸರ್ವರೀತಿಯಿಂದಲೂ ಜನಪದ ಪರಂಪರೆಯ ಸಾಸ್ಕೃತಿಕ ಮಹಾಪೂರ. ಅಗಣಿತವಾದ ಮೌಲ್ಯಗಳು ಮೇರು ಪರ್ವತ ಆಕೆ. ಹೀಗಾಗಿ ಜನಪದರ ಹೇಳಿಕೆಗಳನ್ನು ಕಲಾ ಪ್ರತಿಮೆಯ ಹೂವಗಳಾಗಿವೆ. ಅಸಂಖ್ಯಾತ ಮುಕ್ತಕಗಳನ್ನು ಮಿಂಚಿಸಿ ಕಾವು ರೂಪಕಗಳಲ್ಲಿ ಕಟ್ಟಿಕೊಂಡಿದ್ದಾರೆ.

**ಭಾರತದ ಮೊಟ್ಟಮೊದಲ ಶಿಕ್ಷಕಿ ಸಾವಿತ್ರಿಬಾಯಿ ಪುಲೆ**

ಶೂದ್ರರಿಗೆ ಹೇಳಬೇಕಾದಂತಹ
ಮಾರ್ಗವಿದೆ ಶಿಕ್ಷಣವೆಂಬುದು
ಶಿಕ್ಷಣದಿಂದಲೇ ಮನುಷ್ಯತ್ವ
ಪಶುತ್ವವನ್ನು ಹೋಗಲಾಡಿಸುತ್ತದೆ ನೋಡಿ॥
ಇಂಗ್ಲೀಷ್ ಕುರಿತು ಜಾತಿಭೇದ ನಿವಾರಿಸಿ
ಭಟ್ಟರ ಕಟ್ಟು ಕಥೆ ಕಿತ್ತೊಗೆಯೋಣ ಬನ್ನಿ ॥

ಶಿಕ್ಷಕಿ, ಸಂಚಾಲಕಿ, ಮುಖ್ಯೋಪಾಧ್ಯಾಯಿನಿ, ಸಾಮಾಜಿಕ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿ, ಭಾರತದ ಮೊಟ್ಟಮೊದಲ ಶಿಕ್ಷಕಿ, ದಣಿದವರ ಹೋರಾಟಗಾರ್ತಿ, ಆಧುನಿಕ ಶಿಕ್ಷಣದ ತಾಯಿಯಾದ ಸಾವಿತ್ರಿಬಾಯಿ ಪುಲೆಯವರ ಪುಣ್ಯಸ್ಮರಣಾರ್ಥಕವಾಗಿ ಗೌರವ ನಮನಗಳನ್ನು ಸಲ್ಲಿಸುವುದಕ್ಕಾಗಿಯೇ ಈ ಲೇಖನದ ಮುಖ್ಯ ಉದ್ದೇಶ. ಅಷ್ಟೇ ಅಲ್ಲದೇ ಶಿಕ್ಷಕಿಯಾಗಿ, ಸಾಮಾಜಿಕವಾಗಿ, ಲೇಖಕಿಯಾಗಿ, ಆದರ್ಶ ಪತ್ನಿಯಾಗಿ ಬದಲಾವಣೆಯ ಹರಿಕಾರಿಯಾಗಿ, ಗಣ್ಯರ ದೃಷ್ಟಿಯಲ್ಲಿ ಸಾವಿತ್ರಿಬಾಯಿ ಪುಲೆಯವರನ್ನ ಹೇಗೆ ಗುರುತಿಸಿಕೊಂಡರು ಎನ್ನುವ ಅಂಶವನ್ನು ಇಲ್ಲಿ ಪ್ರಸ್ತುತಪಡಿಸಿದ್ದೇನೆ.

**ಶಿಕ್ಷಕಿಯಾಗಿ ಸಾವಿತ್ರಿಬಾಯಿ ಪುಲೆ : 'ಶಿಕ್ಷಣವೇ ಬದುಕಿನ ಮಾರ್ಗ ಶಿಕ್ಷಣದಿಂದಲೇ ಮನುಷ್ಯತ್ವ ಮೂರ್ಖತನಕ್ಕೆ ಶಿಕ್ಷಣವೇ ಮದ್ದು'**
ಎಂಬ ಮಾತನ್ನ ಜ್ಯೋತಿಬಾ ಪುಲೆಯವರ ವಾಣಿಯಂತೆ ನಡೆದರು. ಶ್ರೀ ಭಿಡೆಯವರ ಮನೆಯಲ್ಲಿ ಆರಂಭಗೊಂಡ ಕನ್ಯಾಶಾಲೆಯ ಪ್ರಧಾನ ಶಿಕ್ಷಕಿಯಾದರು. ಆ ಕಾಲದಲ್ಲಿ ಹಿಂದೂ ಸ್ತ್ರೀಯೊಬ್ಬಳು ಶಿಕ್ಷಕಿಯಾಗುವುದು ಧರ್ಮಕ್ಕೂ, ಸಮಾಜಕ್ಕೂ ದ್ರೋಹ ಬಗೆದಂತೆ. ಅವರ ಪಾಠಶಾಲೆಗೆ ಹೋರಟಾಗ ಕೆಲವರು ಕೇಕೇ ಹಾಕಿ ನಗುತ್ತಿದ್ದರು, ಅವರ ಮೇಲೆ ಕೆಸರು, ಸಗಣಿ ಎರಚಿ, ಕಲ್ಲನೂ ತೂರುತ್ತಿದ್ದರು. ಇದರಿಂದ ಧೃತಿಗೆಡದ ಸಾವಿತ್ರಿಬಾಯಿಯವರು ದಾರಿಯಲ್ಲಿ ಕೆಸರು, ಸಗಣಿ ಎರಚಿದರು ಬೇಸರಗೊಳ್ಳದೇ ಅವುಗಳನ್ನು ಹೂವಗಳೆಂದು ಪರಿಭಾವಿಸಿದರು. ಯಾವಾಗಲೂ ಒಂದು ಸೀರೆಯೊಂದನ್ನು ತಮ್ಮ ಬ್ಯಾಗಿನಲ್ಲಿ ಇಟ್ಟುಕೊಳ್ಳುತ್ತಿದ್ದರು. ಮತ್ತೆ ಶಾಲೆಗೆ ಹೋಗಿ ಮಕ್ಕಳು ಬರುವ ಮುಂಚೆ ಅದನ್ನು ಬದಲಾಯಿಸಿಕೊಂಡು ಪಾಠಕ್ಕೆ ಸಿದ್ದರಾಗುತ್ತಿದ್ದರು. 1848–1852ರ ಅವಧಿಯಲ್ಲಿ 18 ಪಾಠಶಾಲೆಗಳನ್ನು ಪುಲೆ ದಂಪತಿಗಳು ತೆರೆದರು. ಈ ಪಾಠಶಾಲೆಗಳ ಆಡಳಿತದ ಜವಾಬ್ದಾರಿಯನ್ನು ಸಾವಿತ್ರಿಬಾಯಿಯವರೇ ನಿರ್ವಹಿಸಬೇಕಾಗಿತ್ತು. ಶಿಕ್ಷಕಿಯಾಗಿ, ಸಂಚಾಲಕಿಯಾಗಿ, ಮುಖ್ಯೋಪಾಧ್ಯಾಯಿನಿಯಾಗಿ ಮುಂತಾದ ಕೆಲಸಗಳನ್ನು ಇವರು ಸಮರ್ಪಕವಾಗಿ ನಿಭಾಯಿಸುವುದರ ಮೂಲಕ ಜ್ಯೋತಿಬಾ ಪುಲೆ ಅವರಿಗೆ ನೆರವಾದರು. ಬ್ರಿಟಿಷ್ ಸರ್ಕಾರದವರು ವರ ಕೆಲಸ ಕಾರ್ಯಗಳನ್ನು ಕೂಲಂಕುಷವಾಗಿ ಅವಲೋಕಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.
ಇಂದು ಭಾರತದ ಮಹಿಳೆಯರ ಸಮಾಜದ ಎಲ್ಲಾ ಕ್ಷೇತ್ರದಲ್ಲಿ ಸಮಾನತೆಯ ಹಕ್ಕಿಹೆ ಕಾರಣರಾದವರು ಮಾತೆ ಸಾವಿತ್ರಬಾಯಿ ಪುಲೆ. ಮಹಿಳೆಯರಿಗೋಸ್ಕರ ಪ್ರಪ್ರಥಮವಾಗಿ ಅಬಲಾಶ್ರಮ ಶಾಲೆ ಸ್ಥಾಪನೆ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಒಟ್ಟು 14 ಶಾಲೆಗಳನ್ನು ಸ್ಥಾಪನೆ ಮಾಡುತ್ತಾರೆ.
ಈ ಎಲ್ಲಾ ಸಾಧನೆಗಳನ್ನು ಪರಿಗಣಿಸಿ ಬ್ರಿಟಿಷ್ ಸರಕಾರ ಇವರಿಗೆ 'ಇಂಡಿಯಾಸ್ ಫಸ್ಟ್ ಲೇಡಿ ಟೀಚರ್' ಎಂ ಬಿರುದು ಕೂಡ ಕೊಟ್ಟಿದೆ. ಸ್ತ್ರೀಯರು ಕೂಡ ಪುರುಷರಂತೆ ಶಿಕ್ಷಣವನ್ನು ಪಡೆಯಬೇಕೆಂಬ ಮಹದಾಸೆಯಿಂದ ತಮಗೊದಗಿದ ಕಷ್ಟ–ಕಾರ್ಪಣ್ಯಗಳನ್ನು ಲೆಕ್ಕಿಸದೇ ಸ್ತ್ರೀ ಸಂಕುಲಕ್ಕೆ ಶೈಕ್ಷಣಿಕ ರಹದಾರಿಯನ್ನು ತೋರಿಸಿದರು.

**ಸಾಮಾಜಿಕವಾಗಿ ಸಾವಿತ್ರಿಬಾಯಿ ಪುಲೆ**
150 ವರ್ಷಗಳ ಹಿಂದೆಯೇ ಸಾವಿತ್ರಿಬಾಯಿ ಪುಲೆ ಶಾಲೆಯನ್ನು ತೊರೆಯದ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಕೊಡುವ ಯೋಜನೆ ತಂದಿದ್ದರು. ಶಿಕ್ಷಣದಲ್ಲಿ ವೈವಿಧ್ಯತೆಯನ್ನು ತಂದಿದ್ದರು. 1860ರ ದಶಕದಲ್ಲಿ ವಿಧವೆಯರ ತಲೆಬೋಳಿಸುವ ಪದ್ಧತಿಯನ್ನು ಪ್ರಬಲವಾಗಿ ವಿರೋಧಿಸಿದರು. ವಿಧವೆಯರಿಗೆ, ವಿವಾಹಬಾಹಿರವಾಗಿ ಗರ್ಭಿಣಿಯರಾಗುವ ಮಹಿಳೆಯರಿಗಾಗಿ ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಿದರು. ವಿವಾಹಬಾಹಿರ ಸಂಬಂಧದಿಂದ ಹುಟ್ಟಿದ

ಮಕ್ಕಳಿಗಾಗಿ ಭಿನ್ನವಾದ ಶಿಶುಕೇಂದ್ರಗಳನ್ನು ಸ್ಥಾಪಿಸಿದರು. ಈ ಬಗೆಯ ಸಾಮಾಜಿಕ ಸಂಘಟನೆಗಳ ಮೂಲಕ ನೂರಾರು ಮಹಿಳೆಯರ ಮತ್ತು ಮಕ್ಕಳ ಬದುಕಿಗೊಂದು ನೆಲೆ ಕೊಟ್ಟರು.
ಸಾವಿರ್ತಿಬಾಯಿ 'ಸತ್ಯಶೋಧಕ' ಸಮಾಜದ ಅಧ್ಯಕ್ಷೆಯಾಗಿದ್ದರು. 19ನೇ ಶತಮಾನದ ಇತಿಹಾಸದಲ್ಲಿ ಮದುವೆಗಳನ್ನು ಪೂಜಾರಿಗಳಿಲ್ಲದೆ ನೆರವೇರಿಸಿದ್ದುದು ಒಂದು ಕ್ರಾಂತಿಕಾರಿ ಹೋರಾಟವಾಗಿತ್ತು ಎಂಬುವುದು ತಿಳಿದು ಬರುತ್ತದೆ. ಈ ಸಂದರ್ಭದಲ್ಲಿ ಬ್ರಾಹ್ಮಣರ ಅಧಿಪತ್ಯದಲ್ಲಿ ಮದುವೆಗಳನ್ನು ಏರ್ಪಡಿಸಿದ್ದರು. ಅಲ್ಲದೇ ಮೊಟ್ಟಮೊದಲ ಬಾರಿ ಕಾನೂನಿನ ನೆರವನ್ನು ಪಡೆದು ಮದುವೆ ನೆರವೇರಿಸಿದ್ದು ಇಂದಿಗೂ ಇತಿಹಾಸದಲ್ಲಿ ದಾಖಲಾಗದೆ ಉಳಿದಿರುವ ಸಂಗತಿ.

### ಲೇಖಕಿಯಾಗಿ ಸಾವಿತ್ರಿಬಾಯಿ ಪುಲೆ

ಶಿಕ್ಷಕಿಯಾಗಿ, ಸಮಾಜ ಮುಖಿಯಾಗಿ ಲೇಖಕಿಯಾಗಿ ಗುರುತಿಸಿಕೊಂಡವರು ಮಾತೆ ಸಾವಿತ್ರಿಬಾಯಿ ಪುಲೆಯವರು. 1854ರಲ್ಲಿ ಕಾವ್ಯಪೂಲೆ (ಕಾವ್ಯ ಅರಳಿದೆ) ಎನ್ನುವ ಕವನಸಂಕಲನವನ್ನು ಪ್ರಕಟಿಸಿದರು. ಈ ಕಾವ್ಯವು 19ನೇ ಶತಮಾನದ ಸಮಾಜವನ್ನು ದಾಖಲಿಸುವಲ್ಲಿ ಈ ಕಾವ್ಯ ಮಹತ್ವದ್ದಾಗಿದೆ. ಇವರು ಈ ಕೃತಿಯನ್ನು 'ಅಭಂಗ್' ಶೈಲಿಯಲ್ಲಿ ರಚಿಸಿದ್ದಾರೆಂದು ವಿಮರ್ಶಕರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.
ಅವರ ಎರಡನೇಯ ಕೃತಿ 'ಭವನಕಾಶಿ ಸುಬೋಧ ರತ್ನಾಕರ'(ಅಪ್ಪಟ ಮುತ್ತುಗಳ ಸಾಗರ) 1891ರಲ್ಲಿ ಪ್ರಕಟವಾಯಿತು. ಇದು ಜ್ಯೋತಿಬಾ ಅವರನ್ನು ಒಳಗೊಂಡಂತೆ ಬರೆದ ಒಂದು ಆತ್ಮಚರಿತ್ರೆ ಆಗಿದೆ.
ಮೂರನೇ ಕೃತಿ ಜ್ಯೋತಿಬಾ ಅವರ ಭಾಷಣಗಳ ಸಂಪಾದಿತ ಕೃತಿಗಳು 1982ರಲ್ಲಿ ಬಂತು, ಅದೇ ರೀತಿ ನಲ್ಕನೇಯ ಕೃತಿ 'ಕರ್ಜೆ' (ಸಾಲ) ಸಾಮಾಜಿಕ ಕಳಕಳಿಯುಳ್ಳ ಕೃತಿಗಳಾಗಿವೆ.

### ಆದರ್ಶಪತ್ನಿಯಾಗಿ ಸಾವಿತ್ರಿಬಾಯಿ ಪುಲೆ

ಜ್ಯೋತಿಬಾ ಅವರ ತತ್ತ್ವ ಮತ್ತು ಪ್ರಗತಿಪರ ದೃಷ್ಟಿಕೋನವನ್ನು ತಮ್ಮದಾಗಿಸಿಕೊಳ್ಳುವ ಸಾವಿತ್ರಿಬಾಯಿಯವರು ಜೀವಮಾನವಿಡೀ ಪತಿಯೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುತ್ತಾರೆ. ಇವರಿಬ್ಬರ ನಡುವೆ ಒಂದು ಮಧುರವಾದ ಬಾಂಧವ್ಯ ಮತ್ತು ವ್ಯಯಕದತಿಕ ಭಾವನೆಗಳನ್ನು ಗೌರವಿಸಿಕೊಳ್ಳುವ ಗುಣವಿತ್ತು. ಅವರಿಗೆ ಮಕ್ಕಳಿರದಿದ್ದರು ಸಂತೋಷವಾಗಿದ್ದರು. ಪತ್ನಿಯ ಮೇಲೆ ಅಗಾಧ ಪ್ರೀತಿ ಹೊಂದಿದ ಜ್ಯೋತಿಬಾ ಪುಲೆ ಅವರ ಮಕ್ಕಳಿಗಾಗಿ ಮರುಮದುವೆಯಾಗಲಿಲ್ಲ.
ಪುಲೆ ದಂಪತಿಗಳು 1874ರಲ್ಲಿ ವಿಧುವೆಯೊಬ್ಬಳ ಮಗನಾದ ಯಶವಂತನನ್ನು ದತ್ತು ತೆಗೆದಕೊಂಡು, ಆತ ಸಮಾಜದಲ್ಲಿ ಸತ್ಪ್ರಜೆಯಾಗುವ ಅವಕಾಶವನ್ನು ಕಲ್ಪಿಸುತ್ತಾರೆ. 1863ರಲ್ಲಿ ಅನಾಥ ಮಕ್ಕಳಿಗಾಗಿ ಶಿಶುಕೇಂದ್ರವನ್ನು ತೆರೆಯುತ್ತಾರೆ. ಆ ಅನಾಥ ಮಕ್ಕಳೊಂದಿಗೆ ಪ್ರಾಂಜಲ ಮನಸ್ಸಿನಿಂದ ಬೆರೆಯುತ್ತಾರೆ.

### ಬದಲಾವಣೆಯ ಹರಿಕಾರವಾಗಿ ಸಾವಿತ್ರಿಬಾಯಿ ಪುಲೆ

1848ರಲ್ಲಿ ಜ್ಯೋತಿಬಾ ಪುಲೆಯವರೊಂದಿಗೆ ಸೇರಿ ತಳಸಮುದಾಯದ ಹೆಣ್ಣುಮಕ್ಕಳಿಗಾಗಿ ಪುಣೆಯಲ್ಲಿ ಶಾಲೆಯನ್ನು ಪ್ರಾರಂಭಿಸಿದರು. 1855ರಲ್ಲಿ ಕಾರ್ಮಿಕರಿಗಾಗಿ ರಾತ್ರಿಪಾಳೆಯದ ಶಾಲೆ ಸ್ಥಾಪನೆ. 1868ರಲ್ಲಿ ದಲಿತರಿಗಾಗಿ ಮನೆಯ ಕುಡಿಯುವ ನೀರಿನ ಟ್ಯಾಂಕನ್ನು ಬಿಟ್ಟುಕೊಟ್ಟರು. ಬ್ರಾಹ್ಮಣ ವಿಧುವೆಯ ಮಗುವೊಂದನ್ನು ದತ್ತು ತೆಗೆದುಕೊಂಡರು. ಪಶ್ಚಿಮ ಮಹಾರಾಷ್ಟ್ರದ ಕ್ಷಾಮ ಪ್ರದೇಶಗಳಲ್ಲಿ ಎರಡು ವರ್ಷ ಸೇವೆ ಸಲ್ಲಿಸಿದ್ದು ನೋಡಿದಾಗ ಇವರಲ್ಲಿರುವ ಮಾನವೀಯ ಗುಣಗಳು ಎಷ್ಟಿವೇ ಎಂಬುವುದು ತಿಳಿದು ಬರುತ್ತದೆ.

### ಗಣ್ಯರ ದೃಷ್ಟಿಯಲ್ಲಿ ಸಾವಿತ್ರಿಬಾಯಿ ಪುಲೆ

1. ಥಾಮ್ ವುಲ್ಫ ಮತ್ತು ಸುಜನ ಆಂಡ್ರಡೆ– ಸಾವಿರಾರು ದೀಪಗಳನ್ನು ಹಚ್ಚಿದ ಆಧುನಿಕ ಶಿಕ್ಷಣದ ತಾಯಿ ಸಾವಿತ್ರಿಬಾಯಿ ಪುಲೆಗೆ ನೀನು ಚಿರಋಣಿಯಾಗಿರಬೇಕು. ಇಂದಿನ ಅಕ್ಷರಸ್ಥ ಭಾರತೀಯ ಪ್ರತಿಯೊಬ್ಬ ಮಹಿಳೆಯ ಮನದಲ್ಲೂ ಸಾವಿತ್ರಿಬಾಯಿ ಪುಲೆ ಇದಾತ್ತಿದೆ.
2. ಮುಖೇಶ್ ಮಾನಸ – ಶಿಕ್ಷಣದ ಕ್ಷೇತ್ರಕ್ಕೆ ಯಾವ ಬಗೆಯ ಕಾಣಿಕೆಯನ್ನೂ ನೀಡದಂತಹ ವಿದ್ವಾಂಸರು ಹೆಸರಿನಲ್ಲಿ ಇಂದು ಶಿಕ್ಷಕರ ದಿನಾಚರಣೆ ಆಚರಿಸಲಾಗುತ್ತಿದೆ. ಆದರೆ ದಮನಿತ ಸಮುದಾಯಗಳ ಶಿಕ್ಷಣಕ್ಕಾಗಿ ಪ್ರತೇಕ ಶಾಲೆಯನ್ನು ಸ್ಥಾಪಿಸಿ, ಕ್ರಾಂತಿಕಾರಿ ಚಳುವಳಿ ಮಾಡಿದ ಸಾವಿತ್ರಿಬಾಯಿ ಪುಲೆ ಅವರ ಬಗ್ಗೆ ಎಷ್ಟು ಜನರಿಗೆ ಗೊತ್ತಿದೆ?
3. ಮೃದು ವರ್ಮ – 150 ವರ್ಷಗಳ ಹಿಂದೆ ಸ್ತ್ರೀ ವಿಮೋಚನೆ ಕನಸಾಗಿದ್ದ ಕಾಲದಲ್ಲಿ ಅದನ್ನು ನನಸಾಗಿಸಲು ಸಾವಿತ್ರಿಬಾಯಿ ಪುಲೆ ಶ್ರಮಿಸಿದ್ದಾರೆ. ಆದುದರಿಂದ ಸ್ತ್ರೀ ವಿಮೋಚನೆ ಫ್ಯಾಷನ್ ಆಗಿದೆ.
4. ಗೋವಂಡೆ – ಪುಲೆ ದಂಪತಿಗಳ ಪ್ರಕಾರ ಹುಟ್ಟುವ ಪ್ರತಿಯೊಂದು ಮಗುವು ವಿಶೇಷವಾದುದು. ಮಕ್ಕಳು ಭೂಮಿಯ ಮೇಲಿನ ನಕ್ಷತ್ರಗಳು ಎಂದಿದ್ದಾರೆ. ಅವರ ಈ ಮಾತುಗಳಲ್ಲಿ ಎಷ್ಟೊಂದು ಸತ್ಯ ಅಡಗಿದ

### ಪ್ಲೇಟೋ ಮತ್ತು ಅರಿಸ್ಟಾಟಲ್‌ರ ಚಿಂತನೆ

ಇಬ್ಬರು ಪಾಶ್ಚಾತ್ಯ ಕಾವ್ಯಮೀಮಾಂಸೆಯ ಬಹುದೊಡ್ಡ ಚಿಂತಕರು. ಇಬ್ಬರು ಖ್ಯಾತ ಚಿಂತಕನಾದ ಸಾಕ್ರೇಟಿಸ್‌ನ ಶಿಷ್ಯರು. ಕಾವ್ಯಮೀಮಾಂಸೆಯನ್ನು ಅಧಿಕೃತವಾಗಿ ಆರಂಭಿಸಿದ್ದು ಅರಿಸ್ಟಾಟಲ್‌ನಾದರೂ ಅದಕ್ಕೂ ಮುಂಚೆ ಒಂದಿಷ್ಟು ಪ್ರಚೋದನೆ ನೀಡಿದವರು ಪ್ಲೇಟೋ. ಹಾಗಾಗಿ ಪ್ಲೇಟೋನ ಆದರ್ಶ ರಾಜ್ಯದ ಕಲ್ಪನೆ ಮಹತ್ವಪೂರ್ಣವಾಗಿದೆ. ಇಬ್ಬರ ಚಿಂತನೆಗಳ ಕುರಿತು ತಿಳಿಸುವುದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.
ಪಾಶ್ಚಾತ್ಯ ಕಾವ್ಯಮೀಮಾಂಸೆಯ ಗಣಿಗಳಲ್ಲಿ ಅನುಕರಣವಾದವು ಒಂದು. ಬಹು ಚರ್ಚಿತವಾದ ವಾದಗಳಲ್ಲಿ ಅನುಕರಣವಾದವು ಒಂದು. ಇದು ಮೊದಲ ವಾದ ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ. ಇದನ್ನು ಪ್ಲೇಟೋ ತನ್ನ ರಿಪಬ್ಲಿಕ್ ಕೃತಿಯಲ್ಲಿ ಉಲ್ಲೇಖವನ್ನು ಮಾಡಿದ್ದಾನೆ. ಈ ಪದವು ಕವಿಕೃತಿಗೂ ಹೊರಜಗತ್ತಿಗೂ ಇರುವ ನಡುವಿನ ಸಂಬಂಧವನ್ನು ಸೂಚಿಸುತ್ತದೆ ಎಂಬುವುದನ್ನು ಪ್ಲೇಟೋ ಆ ಪದವನ್ನು ಮೂಲಾರ್ಥದಲ್ಲಿ ಬಳಸಿದ್ದಾನೆ. ಕವಿ ಒದಗಿಸುವ ಚಿತ್ರ ಹೊರಜಗತ್ತಿನಲ್ಲಿಯ ಯಾವುದಾದರೊಂದು ವಸ್ತುವೊಂದನ್ನು ಅನುಕರಿಸುತ್ತದೆ ಎನ್ನುವನು. ಅಂದರೆ 'ಕವಿಕೊಡುವ ಚಿತ್ರ ಹೊರ ಜಗತ್ತಿನಲ್ಲಿಯದರ ಅನುಕೃತಿ ಈ ಅನುಕರಣೆ ಕಾವ್ಯಕರ್ಮದ ಜೀವಾಳವಾದ್ದರಿಂದ ಕವಿ ಒದಗಿಸುವುದು ಹೊರ ಜಗತ್ತಿನಲ್ಲಿಯ ಸತ್ಯವನ್ನಲ್ಲ, ಆತ ಒದಗಿಸುವುದು ಸತ್ಯವೆಂದು ಭ್ರಮೆಯನ್ನುಂಟು ಮಾಡಬಲ್ಲ ತೋರಿಕೆಯನ್ನು ಪ್ಲೇಟೋ ಇದನ್ನೇ 'ಅನುಕರಣೆ'"1 ಎಂದು ಕರೆದಿದ್ದಾನೆ.
ಪ್ಲೇಟೋ ಹೇಳುವ ಮಾತಿನಿಂದ ಹೊರ ಜಗತ್ತಿನಲ್ಲಿಯ ವಸ್ತು ವಿಚಾರಗಳಿಗೂ ನೇರವಾದ ಅನುಕರಣೆಯಿಲದಿದ್ದರೂ ಮೂಲವನ್ನು ಒಂದಿಲ್ಲೊಂದು ಬಗೆಯಲ್ಲಿ ಹೋಲುವ ಒಂದು ಬಗೆಯ ಅವಿನಾಭಾವ ಸಂಬಂದ ಇದ್ದೇ ಇರುತ್ತದೆ ಕವಿ ಒದಗುವ ಅಂಥವನ್ನು ಹೋಲುವ ಚಿತ್ರಗಳು ಮಾತ್ರವಾದ್ದರಿಂದ ಅವನ

ಕ್ರಿಯಾವಿಧಾನವನ್ನು ಅನುಕರಣೆ ಎಂಬ ಮಾತಿನಿಂದ ನಿರ್ದೇಶಿಸುವುದು ಸ್ವಾಭಾವಿಕವೇ ಆಗಿದೆ. ಕವಿ ಕಾರ್ಯವನ್ನು ಆಕ್ಷೇಪಿಸಬೃಕಾದಾಗ ಪ್ಲೇಟೋ ಆ ಮಾತನ್ನು ತೆಗಳಿಕೆಯನ್ನು ಸೂಚಿಸುವ ಅರ್ಥದಲ್ಲಿ ಆತ ಬಳಿಸಿದ್ದರೂ ಅದೇ ಮಾತು ಕಾವ್ಯದ ಹೆಚ್ಚಳವನ್ನು ಹೇಳಬೇಕಾದ ಸಂದರ್ಭದಲ್ಲಿ ಹೆಚ್ಚಿನ ಅರ್ಥ ವ್ಯಾಪ್ತಿಯನ್ನು ಪಡೆಯುತ್ತದೆ.

**ಡಾ ಬಿ ಆರ್ ಅಂಬೇಡ್ಕರ : ಹಿಂದೂ ಕೋಡ್ ಬಿಲ್**

ದೇಶದ ಸಾಮಾಜಿಕ ಪರಿಸ್ಥಿತಿಯಲ್ಲಿ ಆಗಾದವಾದ ಪರಿವರ್ತನೆಯನ್ನು ತರಲು ವರ್ಣ ಹಾಗೂ ವರ್ಣಬೇಧಗಳೂ ಸ್ತ್ರೀ–ಪುರುಷ ಲಿಂಗಬೇಧ ತಾರತಮ್ಯವನ್ನು ಹೋಗಲಾಡಿ ಹಿಂದೂ ಸಮಾಜದ ಅಸಮಾನತೆಗಳನ್ನು ತೊಲಗಿಸಿ ಹಿಂದೂ ಸಮಾಜದ ಸಮಗ್ರ ಅಭಿವೃದ್ಧಿಗೆ ನಾಂದಿ ಹಾಡಲು ಡಾ. ಬಿ. ಆರ್ ಅಂಬೇಡ್ಕರವರು ಬೌದ್ಧ, ಜೈನ್, ಸಿಖ್ ಒಳಗೊಂಡಂತೆ ಹಿಂದೂಧರ್ಮವನ್ನು ಪರಿಷ್ಕರಿಸಿ ಏಕರೂಪ ನಾಗರಿಕ ಕಾನೂನು ತರಲು ಹಿಂದೂ ಕೋಡ್ ಬಿಲ್‌ನ್ನು ಸಿದ್ದಪಡಿಸುತ್ತಾರೆ.

ಈ ಹಿಂದೂ ಕೋಡ್ ಬಿಲ್‌ನ್ನು ಈ ಹಿಂದೆ ಸಿದ್ದಪಡಿಸಿದ ಬಿ.ಎನ್ ರಾವ್ ಅವರು ಹಿಂದೂ ಕಾನೂನು ಕುರಿತು ತಯಾರಿಸಿದ ವರದಿಯನ್ನು ಶಾಸ್ತ್ರ, ಪುರಾಣ, ಸ್ಮೃತಿಗಳಲ್ಲಿ ಪ್ರತಿಪಾದಿಸಲಾಗಿದ್ದ ಸಾಮಾಜಿಕ ಆಚರಣೆಗಳನ್ನು ಮತ್ತು ಪ್ರೈವಿ ಕೌನ್ಸಿಲ್‌ನ ತೀರ್ಪುಗಳನ್ನು ಅಧ್ಯಯನ ಮಾಡಿ ಅವುಗಳ ಆಧಾರದ ಮೇಲೆ 'ಹಿಂದೂ ಕಾನೂನು ಸಂಹಿತೆ'ಯನ್ನು ಸಂಸತ್ತಿನಲ್ಲಿ ಮಂಡಿಸಲು ತಯಾರಿ ಮಾಡಿಕೊಳ್ಳುತ್ತಾರೆ. ಈ ಅದ್ಭುತವಾದ ಕಾನೂನುವನ್ನು ನ್ಯಾಯಮೂರ್ತಿಗಳಾದ ಗಜೇಂದ್ರಗಡ್ಕರ ಎಂಬುವವರು ಅಂಬೇಡ್ಕರು ನಮಗೆ ಹಿಂದೂ ಕೋಡ್ ಬಿಲ್‌ನ್ನು ಕೊಡುವುದಾದರೆ ಅದು ಅವರ ಸಾಧನೆಯಲ್ಲಿ ಐತಿಹಾಸಿಕ ಘಟನೆಯಾಗಿ ಚಿರಸ್ಮರಣೀಯವಾಗುತ್ತದೆ' ಎಂದು ವರ್ಣಿಸುತ್ತಾರೆ.

ಹಿಂದೂ ಕೋಡ್ ಬಿಲ್‌ನ ಮಹತ್ವವನ್ನು ಡಾ. ಅಂಬೇಡ್ಕರವರ ಮಾತಿನಲ್ಲಿಯೇ ಅರಿತುಕೊಳ್ಳಬಹುದು. 'ಭಾರತದ ಶಾಸಕಾಂಗದಿಂದ ಈ ಹಿಂದೆ ಪಾಸು ಮಾಡಿದ ಮುಂದೆ ಪಾಸು ಮಾಡಬಹುದಾದ ಯಾವುದೇ ಕಾನೂನಿಗೆ ಅದರ ಮಹತ್ವದ ದೃಷ್ಟಿಯಿಂದ ಇದಕ್ಕೆ ಹಿಂದೂ ಕಾನೂನಿಗೆ ಹೋಲಿಸಲಾಗುವುದಿಲ್ಲ. ಭಾರತೀಯ ಸಮಾಜದ ಜೀವಾಳವೆನಿಸಿರುವ ವರ್ಗ–ವರ್ಗಗಳ ನಡುವೆ ಮತ್ತು ಸ್ತ್ರೀ–ಪುರುಷರ ನಡುವೆ ಇರುವ ಅಸಮಾನತೆಯನ್ನು ತೊಡೆದು ಹಾಕದೆ, ಆರ್ಥಿಕ ಸಮಸ್ಯಗಳ ಕುರಿತಾದ ಕಾನೂನುಗಳನ್ನು ಪಾಸು ಮಾಡುತ್ತಾ ಹೋಗುವುದೆಂದರೆ, ಅದು ನಮ್ಮ ಸಂವಿಧಾನದ ಗೇಲಿ ಮಾಡಿದಂತಾಗುತ್ತದೆಯಲ್ಲಿದೆ. ಸರಣಿ ರಾಶಿಯ ಮೇಲೆ ಅರಮನೆಯನ್ನು ಕಟ್ಟಿದಂತಾಗುತ್ತದೆ. ಇದು ನಾನು ಹಿಂದೂ ಸಂಹಿತೆಗೆ ಕೊಟ್ಟರುವ ಮಹತ್ವ ಅರಿವಾಗುತ್ತದೆ.

ಹಿಂದೂ ಕೋಡ್ ಬಿಲ್‌ನ ಅವಶ್ಯಕತೆ ಹಿಂದಿನ ಮರ್ಮದ ಕುರಿತು ಡಾ. ಅಂಬೇಡ್ಕರ ಅವರು ಹಿಂದೂ ನಿಯಮಾವಳಿಗಳು ಉಚ್ಚನ್ಯಾಯಾಲಯಗಳು ಮತ್ತು ಪ್ರೈವಿ ಕೌನ್ಸಿಲ್ ನೀಡಿರುವ ತೀರ್ಪುಗಳು ಬೇರೆ ಬೇರೆಯಾಗಿ ಚೆದುರಿ ಹೋಗಿದ್ದು ಅವು ಜನಸಾಮಾನ್ಯರಿಗೆ ನ್ಯಾಯ ಸಿಗದೇ ವಾಜ್ಯಗಳು ಹೆಚ್ಚಾಗಿ ಕಗ್ಗಂಡುಗಳಿಂದ ತುಂಬಿ ಹೋಗಿತ್ತು. ಹೀಗಾಗಿಇವುಗಳನ್ನು ಕನೂನು ಬದ್ದವಾಗಿ ರೂಪಿಸಿ ನಿಯಮಗಳನ್ನು ರಚಿಸಲು ಈ ಕಾಯ್ದೆ ಜಾರಿಗೆ ತರಲೆಬೇಕು ಎಂದು ಪಣ ತೊಟ್ಟರು.

ಡಾ. ಅಂಬೇಡ್ಕರವರು ಕಾನೂನು ಬದ್ದ ರೂಪಿಸಿದ ನಿಯಮಾವಳಿಯನ್ನು ಏಳು ವಿಭಿನ್ನ ಅಂಶಗಳ ಆಧಾರದ ಮೇಲೆ ದೇಶದ ಪ್ರತಿಯೊಬ್ಬ ಹೆಣ್ಣುಮಕ್ಕಳಿಗೆ ಸಮಾಜದಲ್ಲಿ ಗೌರವಯುತ ಸ್ಥಾನಮಾನ ತರುವುದು ಮಹತ್ವಾಕಾಂಕ್ಷೆಯಾಗಿತ್ತು.

ಹೆಣ್ಣು ಧನಲಕ್ಷ್ಮಿ, ಮಹಾಲಕ್ಷ್ಮಿ ಸಂಪತ್ತೆಂದು ಪೂಜಿಸುತ್ತಾ ಅವಳಿಗೆ ಆಸ್ತಿಯ ಹಕ್ಕು ನಿರಾಕರಿಸಲಾಗಿತ್ತು. ಹೆಣ್ಣು ವಿದ್ಯಾದೇವತೆ, ಸರಸ್ವತಿ ಎಂದು ಪೂಜಿಸುತ್ತಾ ವಿದ್ಯೆಯನ್ನು ನಿರಾಕರಿಸುಲಗುತಿತ್ತು. ಹೆಣ್ಣು ಶಕ್ತಿದೇವತೆ, ದುರ್ಗಾದೇವತೆ ಪಾರ್ವತಿ ಎಂದು ಪೂಜಿಸುತ್ತಾ ಅಭಲೆಯನ್ನಾಗಿ ಮಾಡಲಾಗಿತ್ತು. ಎಲ್ಲಿ ಹೆಣ್ಣು ಮಕ್ಕಳನ್ನು ಪೂಜಿಸಲಾಗುತ್ತದೆಯೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂದು ಹೇಳುತ್ತಾ ಹೆಣ್ಣು ಸ್ವತಂತ್ರ್ಯಕ್ಕೆ ಅನರ್ಹಳು ಎಂಬ ಹಣೆಪಟ್ಟಿ ಕಟ್ಟಲಾಗಿದೆ.

ರಾಜಕೀಯವಾಗಿ ಮತದಾನ ನೀಡುವ ಅಧಿಕಾರವನ್ನು ಮತ್ತು ಉದ್ಯೋಗಸ್ಥ ಮಹಿಳೆಗೆ ಹೆರಿಗೆ ಸಂದರ್ಭದಲ್ಲಿ(ಅವಧಿ)ವೇತನ ಸಹಿತ ರಜೆಯನ್ನು ವಿಶ್ರಾಂತಿ ಸಹಿತ ಎಂಟು ತಾಸು ಕೆಲಸದ ಅವಧಿ ಮತ್ತು ಸಮಾನ ವೇತನವನ್ನು ಕಾನೂನುಗಳ ಮೂಲಕ ಯಾವ ದೇವಾನುದೇವತೆಗಳು ಮಾಡಲಾಗದ್ದನ್ನು ಬಾಬಾಸಾಹೇಬ ಅಂಬೇಡ್ಕರ್ ಅವರು ಮಾಡಿದ್ದಾರೆ. ಅದೇ ರೀತಿ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಭಾರತದ ಸಮಸ್ತ ಹೆಣ್ಣು ಮಕ್ಕಳಿಗಾಗಿಯೇ 'ಹಿಂದೂ ಕೋಡ್ ಬಿಲ್' ತರಲು ಪಣತೊಟ್ಟು ಫೆಬ್ರುವರಿ 6–1951ರಲ್ಲಿ ಸಂಸತ್ತಿನಲ್ಲಿ ಮಂಡನೆ ಮಾಡುತ್ತಾರೆ.

**ಹಿಂದೂ ಕೋಡ್ ಬಿಲ್‌ನಲ್ಲಿ ಮಂಡಿಸಿದ ಏಳು ಮಸೂದೆಗಳನ್ನು ಈ ಮುಂದಿನಂತಿವೆ.**

1. ಆಸ್ತಿ ಮೇಲಿನ ಜನ್ಮಸಿದ್ದ ಹಕ್ಕನ್ನು ರದ್ದುಪಡಿಸಿ ಉತ್ತರ ಜೀವಿತಾವಧಿಕಾರ ಆಧಾರದಿಂದ ಆಸ್ತಿಯನ್ನು ಪಡೆಯುವುದು.
2. ಮೃತ ತಂದೆಯ ಆಸ್ತಿಯಲ್ಲಿ ಮಗಳಿಗೆ ಅರ್ಧಪಾಲನ್ನು ಪಡೆಯಲು ಕಾನೂನುಗೊಳಿಸುವುದು.
3. ಮೃತ ಪತಿಯ ಆಸ್ತಿಯಲ್ಲಿ ಮಹಿಳೆಯ ಸೀಮಿತ ಸಂಪದಾಸ್ತಿಯಲ್ಲಿ ಪೂರ್ಣ ಹಕ್ಕನ್ನಾಗಿ ಪರಿವರ್ತಿಸುವುದು.
4. ವಿವಾಹ ಮತ್ತು ದತ್ತು ಸ್ವೀಕಾರದಲ್ಲಿ ಜಾತಿಪದ್ದತಿಯನ್ನು ಹೋಗಲಾಡಿಸಲು ಸ್ವಜಾತಿ ನಿರ್ಭಂದವನ್ನು ತಗೆದು ಹಾಕುವುದು.
5. ಬಹುಪತ್ನಿತ್ವವನ್ನು ರದ್ದುಪಡಿಸಿ ಏಕಪತ್ನಿತ್ವವನ್ನು ಕಾನೂನುಗೊಳಿಸುವುದು.
6. ವಿವಾಹ ವಿಚ್ಛೇದನೆಗೆ ನಿಯಮಗಳನ್ನು ರುಪಿಸುವುದು.
7. ಅವಿಭಜಿತ ಆಸ್ತಿ ಪದ್ದತಿಯನ್ನು ತೆಗೆದುಹಾಕಿ ವ್ಯಯಕ್ತಿಕ ಆಸ್ತಿ ಪದ್ದತಿಗೆ ಹಕ್ಕನ್ನ ರೂಪಿಸುವುದು.

ಈ ಏಳು ಅಂಶಗಳನ್ನು ಸದನದಲ್ಲಿ ನಿರೂಪಿಸಿ ಸದಸ್ಯರ ಅಭಿಪ್ರಾಯವನ್ನು ಆಲಿಸ ಬಯಸಯತ್ತಾರೆ ಆದರೆ ಈ ಮಸೂದೆಯನ್ನು ಭಿನ್ನಭಿಪ್ರಾಯ ವ್ಯಕ್ತಪಡಿಸಿದ ಡಾ. ಬಿ. ಪಟ್ಟಾಬಿ, ಸೀತಾರಾಮಯ್ಯ, ವಿ. ನಸೀರುದ್ದೀನ್ ಅಹಮದ್, ಶ್ರೀ ರೋಹಿಣಿಕುಮಾರ ಚೌಧರಿ ಮುಂತಾದವರು. ಇವರು ಭಿನ್ನಭಿಪ್ರಾಯಕ್ಕೆ ಡಾ. ಅಂಬೇಡ್ಕರವರು 'ಇದು ತಲೆಗಳನ್ನು ಎಣಿಸಿ ತಿರ್ಮಾನಿಸಬೇಕಾದ ಪ್ರಶ್ನೆಯಲ್ಲವೇ ಅಲ್ಲ, ಬಹುಮತದ ಅಭಿಪ್ರಾಯಕ್ಕೆ ಅನುಗುಣವಾಗಿ ನಿರ್ಧರಿಸಬೇಕಾದ ಪ್ರಶ್ನೆಯೂ ಅಲ್ಲ. ಸಮಾಜವು ಗತಕಾಲವನ್ನು ಬಿಟ್ಟು ಭವಿಷ್ಯತ್ತಿಗೆ ನಡೆಯುತ್ತಾ ನಡುವೆ ತಾತ್ಕಾಲಿಕ ಹಂತದಲ್ಲಿರುವಾಗ ಪರಸ್ಪರ ವಿರುದ್ಧ ಪರಿಗಣನೆಗಳು ಬಂದೇ ಬರುತ್ತವೆ. ಒಂದು ಭೂತಕಾಲದ ಅನ್ವಯಿಸಬಹುದಾದ ಪರೀಕ್ಷೆ ವ್ಯಕ್ತಿಯ ಆತ್ಮಸಾಕ್ಷಿ ಒಂದೇ ಪ್ರಸ್ತುತ ಮಸೂದೆಯ ಅವಕಾಶಗಳು ಸಮುದಾಯದ ಆತ್ಮಸಾಕ್ಷಿಯೊಂದಿಗೆ ಪರಿಪೂರ್ಣವಾಗಿ ಹೊಂದಿಕೊಂಡಿವೆ ಎಂಬುವುದರಲ್ಲಿ ನನಗೆ ಸಲ್ಪವೂ ಸಂದೇಹವಿಲ್ಲ. ಆದ್ದರಿಂದ ನಮ್ಮ ದೇಶಬಾಂಧವರಲ್ಲಿ ಬಹುತೇಕ ಜನರು ಒಪ್ಪದಿದ್ದರೂ ಈ ಮಸೂದೆಯನ್ನು ಮಂಡಿಸಲು

ನನಗೆ ಹಿಂಜರಿಕೆ ಇಲ್ಲ ಎಂದು ದಿಟ್ಟವಾಗಿ ಉತ್ತರಿಸುತ್ತಾರೆ. ಈ ಪರ –ವಿರೋಧಗಳ ನಡುವೆ ಸದನದ ಅಧ್ಯಕ್ಷರು ಮಸೂದೆಯನ್ನು ಒಂದು ಆಯ್ಕೆ ಸಮಿತಿಗೆ ಒಪ್ಪಿಸುವ ನಿರ್ಧಾರಕ್ಕೆ ಬರುತ್ತಾರೆ.

ಹಲವು ಹಕ್ಕುಗಳ ಜೊತೆಗೆ ಮಹಿಳಾ ಸಬಲೀಕರಣಗೊಳಿಸಲು ಈ ಮಸೂದೆಯನ್ನು ಸಂವಿಧಾನದಲ್ಲಿ ಮಂಡಿಸುತ್ತಿದಂತೆ ಸಂಪ್ರದಾಯ ಹಿಂದೂವಾದಿಗಳು ಮಸೂದೆಯ ವಿಷಯಗಳನ್ನು ತಿಳಿದುಕೊಂಡು ನೆಹರು ಮತ್ತು ಅಂಬೇಡ್ಕರ ವಿರುದ್ಧ ಚಳುವಳಿಯನ್ನು ಪ್ರಾರಂಭಿಸುತ್ತಾರೆ. ನಂತರ ಹಿಂದೂ ಕೋಡ್ ಬಿಲ್ ವಿರೋಧಿ ಸಮಿತಿಯೊಂದನ್ನು ರಚಿಸಿ ಅಖಿಲ ಭಾರತ ವಿರೋಧಿ ಸಂಹಿತೆ ಸಮಿತಿಯು ಹಿಂದೂಗಳ ವ್ಯಯಕ್ತಿಕ ಕಾನೂನುಗಳಲ್ಲಿ ಹಸ್ತಕ್ಷೇಪ ಮಡುವ ಹಕ್ಕನ್ನು ಸಂವಿಧಾನ ಸಭೆ ಹೊಂದಿಲ್ಲವೆಂದು ದೇಶಾದಾದ್ಯಂತ ನೂರಾರು ಪ್ರತಿಭಟನಾ ಸಭೆಗಳನ್ನು ಏರ್ಪಡಿಸುತ್ತವೆ.

ಹಿಂದೂ ಕೋಡ್ ಬಿಲ್ ವಿರೋಧಿ ಸಮಿತಿಯ ಸಂಪ್ರದಾಯವಾದಿ ಬೆಂಬಲಿತ ದ್ವಾರಕಾದ ಪ್ರಭಾವಿ ಶಂಕರಾಚಾರ್ಯ ಸ್ವಾಮೀಜಿ ತೀವ್ರವಾಗಿ ಬಿಲ್‌ನ್ನು ವಿರೋಧಿಸುತ್ತಾರೆ. ಹಿಂದೂ ಧರ್ಮದಲ್ಲಿ 'ಪುರುಷರ ಉದಾತ್ತ ಬೆಳಕು, ಸ್ಫೂರ್ತಿ ಮತ್ತು ಅದನ್ನು ರಕ್ಷಿಸುವುದು ರಾಜ್ಯದ ಕರ್ತವ್ಯವೆಂದು ಹೇಳುತ್ತಾರೆ ಇದರಿಂದ ಪುರುಷನೇ ಶ್ರೇಷ್ಠ ಮತ್ತು ಸ್ತ್ರೀ ಸಮನತೆ ಮತ್ತು ಸಬಲೀಕರಣ ಬೇಕಾಗಿಲ್ಲ' ಎಂಬುವುದು ಸ್ವಾಮೀಜಿಯ ಮಾತುಗಳಿಂದ ತಿಳಿದು ಬರುತ್ತದೆ.

ಈ ವಿವಾಧಕ್ಕೆ ಪ್ರಮುಖವಾಗಿ ಸಂಪ್ರದಾಯವಾಧಿಗಳು 3 ಕಾರಣಗಳನ್ನ ಹೇಳುತ್ತಾರೆ. ಅವು 1. ಜಾತಿ ನಿರ್ಮೂಲನೆಯ ಕಾನೂನುಬದ್ದ ಮದುವೆಗೆ ವಿರೋಧ. 2. ಏಕಪತ್ನಿತ್ವ. 3. ವಿವಾಹ ವಿಚ್ಛೇದನಕ್ಕೆ ಅನುಮತಿ. ಈ ಎಲ್ಲ ಕಾರಣಗಳಿಗೆ ಡಾ. ಅಂಬೇಡ್ಕರ್ ಅವರು ಒಂದೊಂದಾಗಿ ಚರ್ಚೆಗೆ ತಗೆದುಕೊಳ್ಳುತ್ತಾರೆ.

ಹಿಂದೂ ಕೋಡ್ ಬಿಲ್‌ದಲ್ಲಿ ಹಳೆಯ ಮತ್ತು ಹೊಸ ನೀರು ಬೆರತು ಹೊಸ ಭಾರತದ, ಹೊಸ ಸಮಾಜದ, ಹೊಸ ಬೌದ್ಧ, ಜೈನ್, ಸಿಖ್ಖ್ ಧರ್ಮಗಳನ್ನು ಒಗ್ಗೂಡಿಸಿ ಹಿಂದೂ ಧರ್ಮದ ಪುನರುಜ್ಜೀವನಗೊಳಿಸುವ ದಿಟ್ಟ ಹೆಜ್ಜೆಯಾಗಿತ್ತು. ಹಿಂದೂ ಸಮಾಜಕ್ಕೆ ಅಂಟಿಕೊಂಡ ಜಾತಿ–ಕಳಂಕವನ್ನು ನಿರ್ಮೂಲನೆ ಮಾಡಲು ಮಾರ್ಗ ಒಂದನ್ನು ಪ್ರಜ್ಞಾವಂತರಿಗೆ ತೋರಿಸಿಕೊಟ್ಟಿದ್ದರು ಆದರೆ ಹಿಂದೂ ಕೋಡ್ ಬಿಲ್ ಕಾನೂನಾಗಿ ಅಂಗೀಕಾರವಾಗದೇ ಹೋದದ್ದು ಒಂದು ದೌರ್ಭಾಗ್ಯವೇ ಸರಿ.

ಈ ಒಂದು ಕಾರಣದಿಂದ ಸದನದ ಒಳಗೂ ಹೊರಗೂ ಪ್ರತಿಭಟನೆ ಮತ್ತು ವಿರೋಧ ಹೆಚ್ಚುತ್ತಿದ್ದಂತೆ ಪ್ರಧಾನಿ ನೆಹರೂ ಅವರು 'ನಾನು ಸದನಕ್ಕೆ ಈ ವಿಧೇಯಕದ ಬಗ್ಗೆ ಏನು ಭರವಸೆ ನೀಡಬೇಕೆಂದಿಲ್ಲ, ಏಕೆಂದರೆ ಸರಕಾರ ಈ ಕಾರ್ಯವನ್ನು ಮುಂದುವರೆಸಿಕೊಂಡೇ ಹೋಗುವುದು. ಈಗ ಆಗದೇ ಹೋದಲ್ಲಿ ಮುಂದೂಡಿದ ಕಾರ್ಯವನ್ನು ಮತ್ತೆ ಮುಂದಿನ ದಿನಗಳಲ್ಲಿ ಮುಂದುವರೆಸುತ್ತೇವೆ ಆದರೆ ಆದೆಷ್ಟು ಈ ಸಂಸತ್ತಿನಲ್ಲಿಯೇ ಅವಕಾಶ ದೊರೆಯಬಹುದೆಂದು ಆಶಿಸುವೆ' ಎಂದು ವಿಧೇಯಕವನ್ನು ಕೈಬಿಡುತ್ತಾರೆ. ಹಿಂದೂ ಕೋಡ್ ಬಿಲ್ ಡಾ ಅಂಬೇಡ್ಕರವರ ಮಹಾತ್ವಾಕಾಂಕ್ಷೆಯ ಮಸೂದೆಯಾಗಿತ್ತು. ಸದನದಲ್ಲಿ ಅದು ಅಂಗೀಕಾರಗೊಳ್ಳದೆ ಬಿದ್ದುಹೋದಾಗ ಬಹಳ ನಿರಾಶೆಗೊಳ್ಳುತ್ತಾರೆ. ಹಾಗೆ ತಮ್ಮಕಾನೂನು ಮಂತ್ರಿ ಪದವಿಗೆ ರಾಜೀನಾಮೆ ಕೊಡಲು ನಿರ್ಧರಿಸಿ 1951ರ ಸಪ್ಟೆಂಬರ 27ರಂದು ರಾಜೀನಾಮೆ ನೀಡುತ್ತಾರೆ. ಡಾ. ಅಂಬೇಡ್ಕರ್‌ವರು ರಾಜೀನಾಮೆ ನೀಡಿದುದರ ಬಗ್ಗೆ ಸುಧೀರ್ಘವಾಗಿ ವಿವರಿಸಿದ್ದಾರೆ. ಅದರಲ್ಲಿ ಪ್ರಮುಖ ಕಾರಣವೆಂದರೆ ಹಿಂದೂ ಕೋಡ್ ಹಾಗೂ ಸರಕಾರ ಅದಕ್ಕೆ ತೋರಿದ ಅಸಡ್ಡೆ ಎನ್ನುತ್ತಾರೆ. ಈ ವಿಧೇಯಕವನ್ನು ಎಪ್ರೀಲ್ 11 1947ರಂದು ಮಂಡಿಸಲಾಗಿತ್ತು. ಅದನ್ನು ನಾಲ್ಕು ವಿಧಿಗಳನ್ನು ಮಾತ್ರ ಅಂಗೀಕರಿಸಲಾಯಿತು. ಅದು ಸದನದ ಮುಂದೆ ವಾಯುರೋಗ ಪೀಡಿತ ಹಸುಳೆಯಂತೆ ವಿಲಿವಿಲಿ ಒದ್ದಾಡುತ್ತಲೇ ಇತ್ತು. ತದನಂತರ ಕಟಾಚಾರಕ್ಕೆ ಕೆಲವೊಮ್ಮೆ ಚರ್ಚೆಗೆ ತೆಗೆದುಕೊಳ್ಳಲಾಯಿತು. ಫೆಬ್ರುವರಿ 1951ರಲ್ಲಿ ವಿಧಿವತ್ತಾಗಿ ಚರ್ಚೆಗೆ ತೆಗೆದುಕೊಂಡುರೂ ಕೇವಲ 3 ದಿನಗಳ ಕಾಲ ಚರ್ಚಿಸಿ ಅದನ್ನು ಕೊಳೆಯಲೆಂದೇ ಬಿಡಲಾಯಿತು ಎಂದು ಬಹಳ ನೋವಿನಿಂದ ಡಾ. ಅಂಬೇಡ್ಕರ್‌ವರು ಹೇಳುತಾರೆ.

ಮಹಿಳೆಯರ ಸಮಾನತೆಗಾಗಿ ಸಬಲೀಕರಣಕ್ಕಾಗಿ ಹೋರಾಟ ಮಾಡಿ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಅಧಿಕಾರ ತ್ಯೆಜಿಸಿದ ಏಕೈಕ ರಾಜಕಾರಣಿ ಎಂದರೆ ತಪ್ಪಾಗಲಾರದು. ಅಂದು ಬಾಬಾಸಾಹೇಬ ಅಂಬೇಡ್ಕರ್‌ರು ಬದ್ರಬುನಾದಿ ಹಾಕಿ ಕಾನೂನು ಮಂಡಿಸಿದ್ದು ಹೆಂಂಉಮಕ್ಕಳ ಮದುವೆ ಸ್ವಾತಂತ್ರ್ಯದ ಹಕ್ಕಿಗಾಗಿ ಬಹುಪತ್ನಿತ್ವ ವನ್ನು ಹೋಗಲಾಡಿಸಿ ಏಕಪತ್ನಿತ್ವ ಕಾನೂನಿಗಾಗಿ ವಿಚ್ಛೇದನ ಹಕ್ಕಿಗಾಗಿ ಮತ್ತು ಆಸ್ತಿಯಲ್ಲಿ ಸಮಪಲು ಪಡೆಯುವ ಹಕ್ಕಿಗಾಗಿ ಇಂದು ಈ ಎಲ್ಲ ಹಕ್ಕುಗಳು ಹೆಣ್ಣುಮಕ್ಕಳಿಗೆ ಸಿಕ್ಕಿವೆ. ಇವತ್ತು ಹೆಣ್ಣುಮಕ್ಕಳು ಪುರುಷನ ಸರಿಸಮನಾಗಿ ಇವತ್ತು ಎಲ್ಲ ಕ್ಷೇತ್ರದಲ್ಲಿ ಮುಂದೆ ಬಂದಿರುವುದನ್ನು ನೋಡುವುದಾದರೆ ಅದಕ್ಕೆ ಕಾರಣ ಈ ಮಹಾನಾಯಕ ಡಾ. ಬಿ. ಆರ್ ಅಂಬೇಡ್ಕರ್.

**ಅಡಿ ಟಿಪ್ಪಣಿಗಳು**


1. ಗರತಿಯ ಹಾಡುಗಳು – ಹಲಸಂಗಿ ಗೆಳೆಯರು ಪುಟ ಸಂಖ್ಯೆ –24
2. ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ – ಡಾ. ಸಿ. ಬಿ. ಹೊನ್ನಯ್ಯ
3. ಗರತಿಯ ಹಾಡುಗಳು – ಹಲಸಂಗಿ ಗೆಳೆಯರು ಪುಟ ಸಂಖ್ಯೆ 26
4. ಗರತಿಯ ಹಾಡುಗಳು – ಹಲಸಂಗಿ ಗೆಳೆಯರು ಪುಟ ಸಂಖ್ಯೆ 26
5. ಗರತಿಯ ಹಾಡುಗಳು – ಹಲಸಂಗಿ ಗೆಳೆಯರು ಪುಟ ಸಂಖ್ಯೆ 27
6. ಗರತಿಯ ಹಾಡುಗಳು – ಹಲಸಂಗಿ ಗೆಳೆಯರು ಪುಟ ಸಂಖ್ಯೆ 27
7. ಗರತಿಯ ಹಾಡುಗಳು – ಹಲಸಂಗಿ ಗೆಳೆಯರು ಪುಟ ಸಂಖ್ಯೆ 28
8. ಗರತಿಯ ಹಾಡುಗಳು – ಹಲಸಂಗಿ ಗೆಳೆಯರು ಪುಟ ಸಂಖ್ಯೆ 30
9. ಗರತಿಯ ಹಾಡುಗಳು – ಹಲಸಂಗಿ ಗೆಳೆಯರು ಪುಟ ಸಂಖ್ಯೆ 37
10. ಗರತಿಯ ಹಾಡುಗಳು – ಹಲಸಂಗಿ ಗೆಳೆಯರು ಪುಟ ಸಂಖ್ಯೆ 38